# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102

ದೂರವಾಣಿ: (08472) - 256767,239556,255564, ಫ್ಯಾಕ್ಸ್ :(08472) 227527

Email:hkabdgulb@gmail.com, hkrdbklb@gmail.com

Website: hkrdb.kar.nic.in

ಸಂಖ್ಯೆ:ಹೈ.ಕ.ಪ್ರ.ಅ.ಮಂ/ತಾಶಾ/03/2019-20 3107

ದಿನಾಂಕ: 17-07-2019

## ಸುತ್ತೋಲೆ

ವಿಷಯ:- ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಡಿಯಲ್ಲಿ ಬರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಜಾಹೀರಾತುಗಳ ಬಿಲ್ಲುಗಳ ಪಾವತಿ ಕುರಿತು.

ಉಲ್ಲೇಖ:- ಈ ಕಛೇರಿಯ ಸುತ್ತೋಲೆ ಸಂಖ್ಯೆ:ಹೈ.ಕ.ಪ್ರ.ಅ.ಮಂಡಳಿ/ಲೆಶಾ/1/2017-18/ 4250 ದಿ:26.02.2018

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಈ ಕಛೇರಿಯ ಸುತ್ತೋಲೆಯಲ್ಲಿ ಜಾಹಿರಾತುಗಳಿಗೆ ಸಂಬಂಧಿಸಿದ ಬಿಲ್ಲುಗಳ ಪಾವತಿಗಾಗಿ ಬೇಡಿಕೆ ಪತ್ರವನ್ನು ನಕಲು ಬಿಲ್ಲಿನೊಂದಿಗೆ ನೇರವಾಗಿ ಮಂಡಳಿಗೆ ಸಲ್ಲಿಸಬೇಕೆಂದು ಮಂಡಳಿಯ ಖಾತೆಯಿಂದ ಅನುಷ್ಠಾನಾಧಿಕಾರಿಗಳ ಖಾತೆಗೆ ಬಿಡುಗಡೆ ಮಾಡಿ, ನಂತರ ಸಂಬಂಧ ಪಟ್ಟ ಸಂಸ್ಥೆಯವರಿಗೆ ಪಾವತಿಗಾಗಿ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿತ್ತು.

ಆದರೇ ಕಾಮಗಾರಿಗಳ ಅಂದಾಜು ಪತ್ರಿಕೆಯಲ್ಲಿ ನಿಯಮಾನುಸಾರ ಕಾಮಗಾರಿಯ ವೆಚ್ಚದೊಂದಿಗೆ ಇತರೆ ವೆಚ್ಚಗಳಿಗಾಗಿ ಸಹ Misc ಹಣವನ್ನು ಕಾಯ್ದಿರಿಸಲು, ಅವಕಾಶವಿರುತ್ತದೆ ಅದರಂತೆಯೇ, ಅಂದಾಜು ಪತ್ರಿಕೆಯಲ್ಲಿ ಮೂರನೇ ತಂಡದ ಕಾಮಗಾರಿಗಳ ಪರಿವೀಕ್ಷಣಾ ಮೊತ್ತ ಹಾಗೂ PMGSY ಕಾಮಗಾರಿಗಳ STA ರವರ ಅಂದಾಜು ಪತ್ರಿಕೆಯ ಪರಿಶೀಲನಾ ಮೊತ್ತಗಳನ್ನು ಅಳವಡಿಸಲಾಗುತ್ತಿತ್ತು. ಕಾಮಗಾರಿಗಳ ಟೆಂಡರ ಪ್ರಕಟಣೆ ಮೊತ್ತ ಅಳವಡಿಸಿ ಕೊಳ್ಳುತ್ತಿರಲಿಲ್ಲ ಆದ್ದರಿಂದ ಇನ್ನು ಮುಂದೆ ಟೆಂಡರ ಪ್ರಕಟಣೆಯ ಮೊತ್ತವನ್ನು ಪಾವತಿಗಾಗಿ ಕೆಳಗಿನಂತೆ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

1. ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸುವಾಗ ಅದರಲ್ಲಿ ಟೆಂಡರ ಪ್ರಕಟಣೆಯ ಜಾಹೀರಾತು ಹಾಗೂ ಇತರೆ ಜಾಹೀರಾತು ಪ್ರಕಟಣೆಯ ಬಿಲ್ಲುಗಳನ್ನು ಪಾವತಿ ಮಾಡವುದಕ್ಕೆ ಇಡುಗಂಟು ಅಡಕಗೊಳಿಸುವುದು.
2. ಸದರಿ ಟೆಂಡರ ಪ್ರಕಟಣೆಯ ಜಾಹೀರಾತು ಬಿಲ್ಲಗಳನ್ನು ಉಲ್ಲೇಖದಲ್ಲಿ ಈ ಕಛೇರಿಯ ಮುಂಚಿನ ಸುತ್ತೋಲೆಯಂತೆ ನೇರವಾಗಿ ಈ ಕಛೇರಿಗೆ ಸಲ್ಲಿಸದೆ, ಕಾಮಗಾರಿಗಳ ಬಿಲ್ಲುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಪದ್ಧತಿಯಂತೆ ಪಾವತಿಸಲು ಕ್ರಮ ವಹಿಸುವುದು.

ಸದರಿ ವಿಷಯವು ತಕ್ಷಣದಿಂದಲೆ ಜಾರಿಗೆ ತರಲು ಸೂಚಿಸಲಾಗಿದೆ.

17.7.19

ಕಾರ್ಯದರ್ಶಿಗಳು

ಹೈ.ಕ.ಪ್ರ.ಅ.ಮಂಡಳಿ,ಕಲಬುರಗಿ

D/Technical leeter (Y)/ General ltr